ಅಂಗಡಿಯನ್ನು ತೆರೆದರಂತೆ. ಅದರಿಂದ ಒಳ್ಳೆಯ ಲಾಭ ಗಳಿಸಿ ಹೋಲ್‌ಸೇಲ್ ಶುಂಠಿ ಬಿಸಿನೆಸ್ ಶುರುಮಾಡಿದರಂತೆ. ಅದರಲ್ಲೂ ಕೂಡಾ ವಿಪರೀತ ಲಾಭ ಗಳಿಸಿದರಂತೆ. ನಂತರ ಶುಂಠಿ ಎಕ್ಸ್‌ಪೋರ್ಟ್ ಕಂಪನಿಯನ್ನು ಸ್ಥಾಪಿಸಿದರಂತೆ. ಒಮ್ಮೆ ವಿದೇಶಕ್ಕೆ ಕಳಿಸಿದ್ದ ಸುಮಾರು ಇಪ್ಪತ್ತು ಟನ್ ಶುಂಠಿ ರಿಜೆಕ್ಟ್ ಆಗಿ ಕಂಟೈನರ್‌ನಲ್ಲಿ ವಾಪಸ್ಸು ಬಂದಿತಂತೆ. ಅದರಿಂದ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿ, ಅದನ್ನು ಲೋಕಲ್ ಮಾರುಕಟ್ಟೆಯಲ್ಲಾದರೂ ಮಾರೋಣವೆಂದು ಕಂಟೈನರ್ ಬಾಡಿಗೆ ಕಟ್ಟಿ ಶುಂಠಿಯ ಪೆಟ್ಟಿಗೆಗಳನ್ನು ಗೋಡೌನಲ್ಲಿ ತಂದು ಇಳಿಸಿಕೊಂಡರಂತೆ. ಆ ವೇಳೆಗಾಗಲೇ ಕರುಣಾಕರನ್ ಮೊದಲಿಯಾರ್ ತಂದೆ ಬಿಸಿನೆಸ್‌ಗೆ ಇಳಿದು ತಾತನ ಸಹಾಯಕ್ಕೆ ನಿಂತಿದ್ದರಂತೆ. ತಾತ, ತಂದೆ ಇಬ್ಬರೂ ಶುಂಠಿ ಏನಾಗಿರಬಹುದೆಂದು ನೋಡಲು ಒಂದೆರಡು ಪೆಟ್ಟಿಗೆಗಳನ್ನು ಓಪನ್ ಮಾಡಿದರಂತೆ. ಶುಂಠಿಯ ಜೊತೆಯಲ್ಲಿ ಬಂಗಾರದ ಗಟ್ಟಿಗಳು. ಎಲ್ಲಾ ಪೆಟ್ಟಿಗೆಗಳನ್ನು ಕೂಲಂಕಶವಾಗಿ ಪರಿಶೀಲಿಸಿದ್ದರಂತೆ. ಸುಮಾರು ಇನ್ನೂರು ಕೇಜಿ ಗಳಷ್ಟು ಚಿನ್ನದ ಗಟ್ಟಿಗಳು! ಅಷ್ಟೆ, ಅದಾದ ಎರಡು ವರ್ಷಗಳಲ್ಲಿ ಶುಂಠಿ ವ್ಯಾಪಾರದ ಜೊತೆಗೆ ಜ್ಯುವೆಲರಿ ಅಂಗಡಿ ತೆರೆದಿದ್ದರು. ಪ್ರತಿವರ್ಷ ಆರು ನೂರರಿಂದ ಏಳುನೂರು ಕೋಟಿಗಳಷ್ಟು ಬಿಸಿನೆಸ್ ಟರ್ನ್ ಓವರ್. ಶುಂಠಿ ವ್ಯಾಪಾರವನ್ನೂ ಬಿಟ್ಟಿಲ್ಲ. ಸಾವಯವ ಶುಂಠಿಯನ್ನು ಬೆಳೆಯುತ್ತಾರೆ. ತಮ್ಮ ಜ್ಯುವೆಲರಿ ಶಾಪ್‌ಗಳಿಗೆ ಬರುವ ಪ್ರತಿಯೊಬ್ಬ ಗಿರಾಕಿಗೂ ಅರ್ಧ ಕೇಜಿ ಶುಂಠಿಯನ್ನು ಗಿಫ್ಟಾಗಿ ಕೊಡುತ್ತಾರೆ. ಮನೆಯ ಸುತ್ತಲೂ ಸದಾ ಶುಂಠಿ ಬೆಳೆ ಇದ್ದೇ ಇರುತ್ತದೆ. ಬಡಬಗ್ಗರಿಗೆ ದಾನ ಮಾಡುವುದರಲ್ಲಿ ಕರುಣಾಕರನ್ ಮೊದಲಿಯಾರ್ ಎತ್ತಿದ ಕೈಯಂತೆ.

ಇದೆಲ್ಲವನ್ನೂ ಹತ್ತು ನಿಮಿಷದಲ್ಲಿ ಭಗವಾನ್ ಕುಟ್ಟಿ ಹೇಳಿ ಮುಗಿಸಿದ್ದ. ಮನೆಯಲ್ಲಿ ಮೂರು ಗೆಸ್ಟ್ ರೂಮುಗಳಿದ್ದವು. ನನಗೊಂದು ಕೊಠಡಿ, ಕೆ.ಎಮ್. ನಯ್ಯಾರರಿಗೊಂದು ಕೊಠಡಿ ಮತ್ತು ಭಗವಾನ್ ಕುಟ್ಟಿ, ಮನೋಹರ್ ಕುಂಜು ಇಬ್ಬರಿಗೂ ಸೇರಿ ಒಂದು ಕೊಠಡಿಯನ್ನು ನಿಗದಿಪಡಿಸಿದ್ದರು. ಕೊಠಡಿ ಥೇಟ್ ಸ್ಟಾರ್ ಹೋಟೆಲ್ಲಿನ ವಿನ್ಯಾಸ ಮತ್ತು ಸೌಲಭ್ಯಗಳನ್ನು ಹೊಂದಿತ್ತು. ರೂಮುಗಳಲ್ಲಿ ಫ್ರೆಶ್ ಆಗಿ ಏಳೂವರೆ ಗಂಟೆಗೆ ನಡುಮನೆಯಲ್ಲಿ ಸೇರಲು ನಿರ್ಧಾರ ಮಾಡಲಾಗಿತ್ತು. ಎಲ್‌ಎಸ್ಡಿ ಟ್ರಿಪ್ ಬಹುಶಃ ಕಂಪ್ಲೀಟ್ ಆಗಿತ್ತು ಅನ್ನಿಸುತ್ತದೆ. ಸ್ನಾನ ಮಾಡುತ್ತಿದ್ದಂತೆ ಹಗುರವಾಗುವುದರೊಂದಿಗೆ ಹಸಿವು ಕಾಡತೊಡಗಿತ್ತು. ಸರಿಯಾಗಿ ಏಳೂವರೆ ಗಂಟೆಗೆ ನಾನು ಆ ವಿಶಾಲವಾದ ಹಾಲನ್ನು ಪ್ರವೇಶಿಸಿದಾಗ ನಯ್ಯಾರ್ ಮತ್ತು ಭಗವಾನ್ ಕುಟ್ಟಿ ಆಗಲೇ ಬಂದು ಕುಳಿತಿದ್ದರು. ಸಿನಿಮಾ ಸ್ಕ್ರೀನಿನಂತೆ ಇದ್ದ ಟೀವಿ ಪರದೆಯ ಮೇಲೆ ವಾರ್ತೆಗಳು ಬಿತ್ತರವಾಗುತ್ತಿದ್ದವು. ಕರುಣಾಕರನ್ ಮೊದಲಿಯಾರ್ ನಮಸ್ಕರಿಸುತ್ತಾ ಕುಳಿತುಕೊಳ್ಳಲು ಸೋಫಾ ತೋರಿಸಿದ್ದರು. ನಾನು ಪ್ರತಿನಮಸ್ಕರಿಸುತ್ತಾ ತೋರಿಸಿದ ಮೆತ್ತನೆಯ ಸೋಫಾದ ಮೇಲೆ ಕುಳಿತಿದ್ದೆ. ಬಿಸಿಬಿಸಿ ಶುಂಠಿ ಕಷಾಯವನ್ನು ಕುಡಿಯಲು ಕೊಟ್ಟಿದ್ದರು. ಅಷ್ಟೊಂದು ರುಚಿಕರವಾದ ಶುಂಠಿ ಕಷಾಯವನ್ನು ಖಂಡಿತವಾಗಿಯೂ ನಾನು ಇದೇ ಮೊದಲ ಬಾರಿ ಕುಡಿಯುತ್ತಿದ್ದೆ. ಕೆ.ಎಮ್. ನಯ್ಯಾರ್ ನನ್ನ ಕಡೆಗೆ ನೋಡಿ 'ಈ ಕರುಣಾಕರನ್ ಮೊದಲಿಯಾರ್ ಮಗ ಗಂಗಾಧರನ್ ಮೊದಲಿಯಾರ್‌ಗೆ ನಮ್ಮ ಅರುಂಧತಿ ಪಿಳ್ಳೈ ಮೇಲೆ ತುಂಬಾನೇ ಮನಸ್ಸಿತ್ತು. ಮಾಧವನ ಪಿಳ್ಳೈ, ನಾನು ಮತ್ತು ಅಷ್ಟೇಕೆ ನಮ್ಮ ಸಿಂಧೂ ಮೆನನ್ ಎಲ್ಲರೂ ಒಪ್ಪಿದ್ದೆವು. ಆದರೆ ಆ ಹುಡುಗಿಯೇಕೋ ಹಿಂದೆ ಸರಿದುಬಿಟ್ಟಳು. ನಮ್ಮ ಮೊದಲಿಯಾರ್ ಮನೆ ಸೇರಿದ್ದರೆ ಆ ಹುಡುಗಿ ಇಂದು ಬದುಕೀ ಉಳಿಯುತ್ತಿದ್ದಳು' ಎಂದು ಕಣ್ಣೊರೆಸಿಕೊಂಡಿದ್ದಳು. ಅರುಂಧತಿ ಪಿಳ್ಳೈಳನ್ನು ನೆನೆದು ನನಗೆ ಎದೆಯಾಳದಲ್ಲಿ ದುಃಖ ಮಡುಗಟ್ಟಿತ್ತು. ಮೂರು ದಿನಗಳ ಹಿಂದೆ ಅವಳ ದೇಹವನ್ನು ಇಡಿಯಾಗಿ ಅನುಭವಿಸಿದ್ದು ನೆನಪಾಗಿ ಮೈ ಸಣ್ಣಗೆ ನಡುಗಿತ್ತು. 'ಅದೆಲ್ಲಾ ಏಕೆ ಬಿಡಿ ನಯ್ಯಾರ್ ಸ್ವಾಮಿಗಳೇ ಈಗ, ಎಲ್ಲದಕ್ಕೂ ಋಣಾನುಬಂಧ ಇರಬೇಕಲ್ಲ. ಡೈನಿಂಗ್ ಟೇಬಲ್ಲಿಗೆ ಹೋಗೋಣ' ಎಂದು ಹಾಲ್‌ಗೆ ಅಂಟಿಕೊಂಡಂತಿದ್ದ ಡೈನಿಂಗ್ ಹಾಲ್‌ಗೆ ಕರೆದುಕೊಂಡು ಹೋಗಿದ್ದರು. ಅದು ಇಪ್ಪತ್ತು ಜನ ಕುಳಿತು ಊಟ ಮಾಡಬಹುದಾದಂಥ ಡೈನಿಂಗ್ ಟೇಬಲ್. ರೋಸ್ ವುಡ್ಡಲ್ಲಿ ಮಾಡಿಸಿದ್ದು. ಹತ್ತು ಲಕ್ಷ ರೂಪಾಯಿ ಆಯ್ತು. ಮನೆಯಲ್ಲಿ ಎಲ್ಲಾ ಸೇರಿ ಹದಿನೈದು ಜನ ಇದ್ದೇವೆ. ತಿಂಡಿ ಮತ್ತು ರಾತ್ರಿ ಊಟ ಎಲ್ಲರೂ ಒಟ್ಟಿಗೆ ಮಾಡುತ್ತೇವೆ. ಮಧ್ಯಾಹ್ನದ ಊಟಕ್ಕೆ ಏಳೆಂಟು ಜನ ಗೈರುಹಾಜರಾಗಬಹುದು. ಯಾರಿಗೆ ಏನೇ ಸಮಸ್ಯೆಯಿದ್ದರೂ ಡೈನಿಂಗ್ ಟೇಬಲ್ಲಲ್ಲಿ ಮಾತನಾಡುತ್ತೇವೆ. ಪಿಸಪಿಸ ಗುಸಗುಸ ನಮ್ಮ ಮನೆಯಲ್ಲಿ ನಿಷೇಧ. ಹಾಗಾಗಿ ಈ ಹದಿನೈದು ವರ್ಷಗಳಿಂದ ಒಂದೇ ಒಂದು ಸಣ್ಣ ಮನಸ್ತಾಪ ಈ ಮನೆಯಲ್ಲಿ ಯಾರಲ್ಲೂ ಉಂಟಾಗಿಲ್ಲ. ಇಡೀ ಕುಟುಂಬ ಒಟ್ಟಿಗೆ ಕುಳಿತು ಊಟ ಮಾಡುವುದು ಇದೆಯಲ್ಲಾ ಅದಕ್ಕಿಂತಲೂ ದೊಡ್ಡ ಕೌಟುಂಬಿಕ ನ್ಯಾಯ ಮತ್ತು ಫ್ಯಾಮಿಲಿ ಕೌನ್ಸೆಲಿಂಗ್ ಮತ್ತೊಂದಿಲ್ಲ' ಎಂದು ಕರುಣಾಕರನ್ ಮೊದಲಿಯಾರ್ ಡೈನಿಂಗ್ ಟೇಬಲ್ಲಿನ ಮಹತ್ವವನ್ನು ಅತ್ಯಂತ ತಣ್ಣಗೆ ಹೇಳಿದ್ದರು. ನಮ್ಮ ಮದುವೆಯಾಗಿ ಐದು ವರ್ಷಗಳಲ್ಲಿ ನಾನು ಮತ್ತು ನನ್ನ ಹೆಂಡತಿ ಆಶಾ ಬೆಂಗತಮಲೆ ಬೆರಳುಗಳಲ್ಲಿ ಎಣಿಸಿಕೊಂಡಂತೆ ಒಂದಿಪ್ಪತ್ತು ಸಾರಿ ಒಟ್ಟಿಗೆ ಕುಳಿತು ಊಟ ಮಾಡಿದ್ದೇವೇನೋ! ಡೈನಿಂಗ್ ಟೇಬಲನ್ನು ಒಪ್ಪ ಓರಣವಾಗಿಡಲಾಗಿತ್ತು. ನಾನಾ ತರಹದ ಅಪರೂಪದ ಮತ್ತು ಸುಂದರವಾದ ವಿಸ್ಕಿ, ಜಿನ್ ಮತ್ತು ವೈನ್ ಬಾಟಲಿಗಳನ್ನು ಟೇಬಲ್ಲಿನ ಮಧ್ಯ ಭಾಗದಲ್ಲಿ ಅಲ್ಲಲ್ಲಿ ಇಡಲಾಗಿತ್ತು. ಫಿಶ್, ಚಿಕನ್ ಮತ್ತು ವೆಜಿಟೇರಿಯನ್ ಭಕ್ಷ್ಯಗಳ ವಿವಿಧ ಐಟಂಗಳನ್ನು ಹಬೆಯಾಡುವ ಪಾತ್ರೆಗಳಲ್ಲಿ ಇಡಲಾಗಿತ್ತು. ಕರುಣಾಕರನ್ ಮೊದಲಿಯಾರ್ ತಾವೇ ಮುಂದೆ ನಿಂತು ವಿಚಾರಿಸಿಕೊಳ್ಳುತ್ತಿದ್ದರು. 'ಪಾನೀಯ ಮತ್ತು ಊಟಕ್ಕೆ ನಮ್ಮ ಮನೆಯಲ್ಲಿ ನಿಯಂತ್ರಣವೂ ಇಲ್ಲ, ಬಲವಂತವೂ ಇಲ್ಲ. ಅವರವರಿಗೆ ಪ್ರಿಯವಾದದ್ದನ್ನು ಕುಡಿಯಬಹುದು, ತಿನ್ನಬಹುದು. ಇದು ನಮ್ಮ ಮನೆಯಲ್ಲಿ ಬಹಳ ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ನೀವೂ ಕೂಡಾ ನಮ್ಮ ಮನೆಯವರೇ ಆಗಿರುವುದರಿಂದ ಯಾವ ಸಂಕೋಚವೂ ಇಲ್ಲದೆ ನಿಮಗೆ ಏನೇನು ಬೇಕೋ ಅದನ್ನು ಸೇವಿಸಬಹುದು' ಎಂದು ತಾವೇ ಖುದ್ದಾಗಿ ಗ್ಲಾಸುಗಳನ್ನು, ತಟ್ಟೆಗಳನ್ನು ಇಟ್ಟಿದ್ದರು. ನನಗೆ ಮತ್ತು ಕೆ.ಎಮ್. ನಯ್ಯಾರರಿಗೆ ಡಲ್ಮೋರ್ ಎಂಬ ವಿಸ್ಕಿಯನ್ನು ಗ್ಲಾಸುಗಳಿಗೆ ಹಾಕಿ ಅದಕ್ಕೆ ಐಸ್ ಕ್ಯೂಬ್ಸ್ ಹಾಕಿ ಕೊಟ್ಟಿದ್ದರು. 'ತುಂಬಾ ದುಬಾರಿ ಬೆಲೆಯ ವಿಸ್ಕಿ. ಒಂದು ಬಾಟಲ್ ಆರು ಲಕ್ಷ ರೂಪಾಯಿಗಳಾದರೂ ಇರುತ್ತದೆ. ರಾಜ್ಯದ ಲಕ್ಷಾಂತರ ಜನ ಮಳೆ ಮತ್ತು ಪ್ರವಾಹಗಳ ಆರ್ಭಟಕ್ಕೆ ಸಿಲುಕಿ ಅತ್ಯಂತ ಸಂಕಷ್ಟ ಸ್ಥಿತಿಯಲ್ಲಿರುವಾಗ ಇಂಥ ದುಬಾರಿ ಡ್ರಿಂಕ್ಸ್ ಕುಡಿಯುತ್ತಾ, ಐಷಾರಾಮಿ ಊಟ ಮಾಡುತ್ತಾ ಕಾಲಕಳೆಯುತ್ತಿರುವುದು ನನಗೇತಕ್ಕೋ ತುಂಬಾ ದುಃಖ ಅನ್ನಿಸುತ್ತಿದೆ'. ನಯ್ಯಾರ್ ನಿಜಕ್ಕೂ ಆತ್ಮಪೂರ್ವಕವಾಗಿ ಭಾವುಕರಾಗಿರುವರೋ ಇಲ್ಲ ಎಲ್‌ಎಸ್ಡಿ ಟ್ರಿಪ್ ಮುಗಿಸಿದ ನಂತರ ತೆಗೆದುಕೊಳ್ಳುತ್ತಿರುವ ಡ್ರಿಂಕ್ಸ್‌ನ ಎಫೆಕ್ಟೋ ಎಂದು ನಾನು ಗೊಂದಲದಲ್ಲಿ ಬಿದ್ದಿದ್ದೆ.

'ಯಾಕೆ ಕೆ.ಎಮ್.ಎನ್. ಇವೊತ್ತು ಹೀಗೆ ಮಾತನಾಡ್ತ ಇದೀರಿ. ನೀವು ತುಂಬಾ ಡಿಸ್ಟರ್ಬ್ ಆದಂಗೆ ಅನ್ನಿಸ್ತಿದೆ ನನಗೆ. ನಿಮ್ಮ ಹೆಸರಿನ ಗುಣಲಕ್ಷಣಗಳೇನಾದರೂ ನಿಮ್ಮ ದೇಹ ಮತ್ತು ಮನಸ್ಸುಗಳಿಗೆ ಇಳಿದಿರಬಹುದೇನೋ ಎಂಬ ಅನುಮಾನ ನನಗೆ. ಜಗತ್ತಿನಾದ್ಯಂತ ಬಡವರೂ, ಜನಸಾಮಾನ್ಯರೇ ಅತ್ಯಂತ ನೆಮ್ಮದಿಯನ್ನು ಕಾಣುತ್ತಿರೋದು ಅಂತ ನೀವೇ ಹೇಳ್ತಿದ್ರಿ. ಅಪ್ಪ ಕಾರ್ಲ್ ಮಾರ್ಕ್ಸ್‌ನ ದೊಡ್ಡ ಆರಾಧಕರಾಗಿದ್ದರು. ಹಾಗಾಗಿಯೇ ಆತನ ಹೆಸರನ್ನೇ ನಿಮಗಿಟ್ಟರು. ಬಂಡವಾಳ ಹೂಡುವವನು ಎಂದೂ ನೆಮ್ಮದಿಯಿಂದ ಇರಲಾರ. ಪ್ರತಿಕ್ಷಣ ಎಲ್ಲಾ ರಿಸ್ಕುಗಳನ್ನೂ ಮ್ಯಾನೇಜ್ ಮಾಡಬೇಕು. ಮಾರುಕಟ್ಟೆ ಕೈಕೊಟ್ಟರೆ ಮುಗೀತು. ಆದರೆ ಕಾರ್ಮಿಕರದ್ದು ಶ್ರಮಪಡುವುದಷ್ಟೆ ಕೆಲಸ. ಅದಕ್ಕೆ ತಕ್ಕ ಪ್ರತಿಫಲ ಪಡೆದು ಹಾಯಾಗಿರುತ್ತಾರೆ. ಇಷ್ಟಕ್ಕೂ ಎಲ್ಲರೂ ಬಂಡವಾಳಗಾರರಾದರೆ ಶ್ರಮಪಡುವುದು ಯಾರು? ಒಂದು ವೇಳೆ ಎಲ್ಲರೂ ಕಾರ್ಮಿಕರೇ ಆದರೆ ಮ್ಯಾನೇಜ್ ಮಾಡುವವರು ಯಾರು? ಜಗತ್ತಿನಲ್ಲಿ ಆಯಾ ಕಾಲಕ್ಕೆ ಏನು ನಡೆಯಬೇಕೋ ಅದೇ ಆಗುವುದು. ಯಾವ ಸಿದ್ಧಾಂತಗಳೂ ಮನುಷ್ಯರೊಂದಿಗೆ ಸ್ಥಿರವಾಗಿ ನಿಲ್ಲಲಾರವೆಂದು ನೀವೇ ಹೇಳುತ್ತಿದ್ದರಿ. ಇಷ್ಟಕ್ಕೂ ಎಷ್ಟು ಜನ ಶ್ರೀಮಂತರು ನಿಮ್ಮಂತೆ ಬಡವರಿಗೆ ಮತ್ತು ಕಾರ್ಮಿಕರಿಗೆ ನೆರವಾಗುತ್ತಾರೆ. ಅಣ್ಣ ಸುಧೀಂದ್ರ ನಯ್ಯಾರ್ ಮೂಲಕ ನೀವು ನಡೆಸುತ್ತಿರುವ ಚಾಲೆಂಜ್ ದಿ ಚಾಲೆಂಜ್‌ನಂಥ ಟ್ರಸ್ಟನ್ನು ದೇಶದ ಎಷ್ಟು ಜನ ಶ್ರೀಮಂತರು ನಡೆಸುತ್ತಿದ್ದಾರೆ. ಹೋದ ವರ್ಷ ಅಪ್ಪ ಸಾಯುವವರೆಗೂ ನಿಮ್ಮ ತಂದೆಯವರ ಮತ್ತು ನಿಮ್ಮ ಗುಣಗಾನವನ್ನು ಸದಾ ಮಾಡುತ್ತಿದ್ದರು' ಎಂದು ಕರುಣಾಕರನ್ ಮೊದಲಿಯಾರ್ ನುರಿತ ಉಪನ್ಯಾಸಕನಂತೆ ಮಾತನಾಡಿದ್ದರು.

(ಸಶೇಷ)